Mr. DEPUTY SPEAKER.—Sri D. M. Siddaiah raised a point of Order and I wanted to give a Ruling. In the meanwhile some members intervened. There is no force in the Point of Order raised by Sri D. M. Siddaiah. As the Speaker has already called upon Sri Siddaiah to speak, he may continue.

Sri K. H. PATIL.—Is it not a privilege issue ? Are we to take it that even casting of aspersions on the Chair is no privilege ? The Chair cannot protect any person against the rule. It is the duty of the Chair.....

Mr. DEPUTY SPEAKER.—The hon. Member may please resume his seat. * * * * * *

Sri H. M. CHANNABASAPPA.—Hon. Member Sri K. H. Patil has raised some pertinent points. When a situation arises wherein a privilege question arises, it is open to any member of the House, with your permission, to raise it. It need not be necessarily in writing. It is up to the Chair to take action and if it is a privilege question, you will have to take the sense of the House and refer it to the Privilege Committee. When the question of a privilege is raised, it will have precedence over other matters.

We cannot carry on the business of the House beyond the normal time of 6 O'clock, unless the House extends the time. This House has not extended the time. The Speaker was just seeking the sense of the House in this regard. Before the sense of the House was taken the Speaker left the dais. Since we have not taken any decision, we cannot sit for any length of time. I request you to kindly clarify the points that I have raised now.

Mr. DEPUTY SPEAKER.—With regard to the extension of time, the Speaker is consulting the leaders. Sri K. H. Patil says it is a Privilege question. There is no question of privilege in it.

Sri R. DAYANANDA SAGAR.—The dignity of the Chair is at peril. It is our duty to protect the Chair if anybody casts aspersions. "The Chair is dictated by the Opposition" is the statement of the hon. Member. How could we tolerate ? * * * * * *

Sri K. H. PATIL.—The hon. Member Sri Siddaiah stated that the Speaker is dictated by the Opposition which is not in keeping with the dignity of the House. Therefore you kindly give a considered decision after satisfying yourself whether there is any *prima facie* case.

Sri K. H. SRINIVASA.—On a point of order. The Chair has already ruled saying that whatever the hon. Member Sri Siddaiah uttered does not amount to a question of privilege and again to debate on that same point, would amount to debating on the rulings of the Chair which is not allowed under the rules of procedure.

Mr. DEPUTY SPEAKER.—The hon. Member Sri K. H. Patil knows the rules very well. He is a senior parliamentarian. He has already stood up so many times and spoken.

Sri K. H. PATIL.—Sir, you are probably referring to the provision under the rules of procedure wherein the speech has to be made only once. I am not at all making a speech. It is my bounden duty to safeguard the interest and dignity of this House and for that I can speak as many times as it necessitates.

Sri R. DAYANANDA SAGAR.—We have great respect to the rulings of the Chair. We are only concerned with the dignity of this House. The hon. Member has cast an aspersion on the Chair. I request you only to safeguard the interests and dignity of this House.

---

* * * Matter not recorded as ordered by the Chair.

Mr. DEPUTY SPEAKER.—The Chair is not dictated by any Member of this House. I am only guided by the rules.

Sri R. DAYANANDA SAGAR.—If the hon. Member were to question the Chair then who is going to control the House ?

7-00 P.M.

Sri B. P. GANGADHAR.—Sir, I have a solution to solve the problem. It is better that the House is adjourned for the day ಹಾಗೆ ಮಾಡಿದರೆ ತಾಪತ್ರಯವಿರುವುದಿಲ್ಲ. ಇಲ್ಲದಿದ್ದರೆ ನಿಲುವಳಿ ನೂಚನೆಗಳು, ಕ್ರಯಾರೋಪಗಳು, ಬ್ರೀಚ್ ಆಫ್ ಪ್ರಿವಿಲೇಜ್ ವಿಚಾರ ಮುಂತಾದುವು ಒಂದಾದಮೇಲೆ ಒಂದು ಬರುತ್ತಲೇ ಇರುತ್ತವೆ. ನಾಳೆಯು ರಾತ್ರಿಯವರೆಗೆ ಕುಳಿತರೂ ಹೀಗೇ ನಡೆಯುವುದು. ಆದುದರಿಂದ ದಯೆಯಿಟ್ಟು ಈಗ ಅಡ್ಜರ್ನ್ ಮಾಡಿ, ನಾಳೆ ಮಾತನಾಡೋಣ.

ಉಪಾಧ್ಯಕ್ಷರು.—ಅಧ್ಯಕ್ಷರು ಬರಲಿ, ಆಮೇಲೆ ನೋಡೋಣ.

* * *

[Mr. SPEAKER in the Chair]

Mr. SPEAKER.—The time was extended by one hour up to 7 P.M. After considering all the pros and cons and after taking into consideration the promises made by the leaders of both the parties it was unanimously agreed that the matter must be finished today. If the House agrees, I will extend the time by two or two and a half hours. I shall give five minutes to each member and half an hour for Government reply and the debate will conclude at 9 P.M.

Sri VEERENDRA PATIL (Chief Minister).—The time may be extended up to 9-30 P.M.

Sri K. H. PATIL.—I oppose it on the ground that the time already extended, *viz.*, 7 P.M. is already over.

Mr. SPEAKER.—I shall put the motion to the House.

The question is :

"That the time for debate of this motion be extended up to 9-30 P.M."

The motion was adopted.

Mr. SPEAKER.—The time is extenned up to 9-30 P.M.

Sri R. DAYANANDA SAGAR —We do not like this arbitrary attitude. It is as if when Rome was burning Nero was fiddling. People are looking at you. You cannot take a decision like that. You are a responsible person; you are not an individual; you are responsible to the entire State.

ಮನಸ್ಸಿಗೆ ಬಂದಹಾಗೆ ತೀರ್ಮಾನ ಮಾಡಿಕೊಂಡು ಸರಕಾರದ ಮಾತು ಕೇಳಿಕೊಂಡು ಕೆಲಸ ಮಾಡುವುದಕ್ಕಾಗುತ್ತದೆಯೆ ! ತಾವು ಇಡೀ ನಭೆಗೆ, ದೇಶಕ್ಕೆ ಸ್ಪೀಕರ್ ಆಗಿದ್ದೀರಿ. ಧರ್ಮವನ್ನು ಎತ್ತಿ ಹಿಡಿಯುವ ಜವಾಬ್ದಾರಿ ನಿಮ್ಮ ಹೆಗಲ ಮೇಲೆ ಬಿದ್ದಿದೆ. ದೇಶದಲ್ಲಿ ಭಾರಿ ಹೋರಾಟ

**** Matter not recorded as ordered by the Chair.

(SRI R. DAYANANDA SAGAR)

ನಡೆಯುತ್ತಾ ಇದೆ. ವಿದ್ಯಾರ್ಥಿಗಳು ರೊಚ್ಚಿಗೆ ಎದ್ದಿದ್ದಾರೆ. ದೇಶದಲ್ಲಿ ಅನ್ಯಾಯ ನಡೆಯುತ್ತಿದೆ, ಅನಾಹುತ ನಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಸಭೆಯ ಸದಸ್ಯರು ಜನಗಳ ಪ್ರತಿನಿಧಿಗಳಾಗಿರುವುದರಿಂದ ಜನರ ಅಭಿಪ್ರಾಯಗಳನ್ನು ಇಲ್ಲಿ ನಿರೂಪಿಸಬೇಕು. ಇಂತಹ ಸಮಯದಲ್ಲಿ ಅರ್ಬಿಟ್ರರಿಯಾಗಿ ಹೀಗೆ ಮಾಡುತ್ತೀವೆ ಹಾಗೆ ಮಾಡುತ್ತೀವೆ ಓಟಿಗೆ ಹಾಕುತ್ತೀವೆ, ಚರ್ಚೆಗೆ ಅವಕಾಶಕೊಡುವುದಿಲ್ಲ ಎಂದರೆ ಹೇಗೆ ? ಇದು ಯಾವ ಧರ್ಮ, ಯಾವ ನ್ಯಾಯ ? ಇದು ಸರಿಯಲ್ಲ. ಆದ್ದರಿಂದ ಈ ಸಭೆಯನ್ನು ಅಡ್ಜರ್ನ್ ಮಾಡಿ ನಾಳೆ ಮಾತನಾಡುವುದಕ್ಕೆ ಅವಕಾಶಕೊಡಿ.

Mr. SPEAKER.—The hon. Member is talking of *dharma* and morals. Only two Members have spoken and what about others who want to speak ? Shouting will be of no use.

Sri R. DAYANANDA SAGAR.—I have come here to shout on behalf of my people.

Mr. SPEAKER.—Everybody represents a constituency; it is not only the hon. Member who represents a constituency. I have placed the facts in all their nakedness before the House. Sriyuths Siddaveerappa, Huchmasthi Gowda, Sivappa and Venkatagiriyappa solemnly promised that this matter would be finished today. There was no difference of opinion on this point. The difference was only in respect of the time to be allotted to the Bills. Having made the promise, they must try to fulfil it. So, let everybody be brief and let everybody have his say ; it is not that I am denying an opportunity to anybody.

Sri R. DAYANANDA SAGAR.—The dicussion on the remarks of Sri Bommai took nearly two hours. Who is responsible for that ? You have to be just and fair.

Sri H. SIDDAVEERAPPA.—You have dragged my name and the name of Sri Sivappa and some other friends, it looks as though hereafter whenever you call, we should not go. But courtesy demands we should respond. If whenever the Speaker wants we go and if at every time, we are called as witnesses and then asked to depose and questioned how on this and how on that, then we will have to think twice before complying with the Speaker's request. It is a fact that we had told you that if time permits, this can be concluded. You seem to feel that somehow just as the Government, in spite of protests from every corner of the State against the delegation to EXPO persisted in sending the team, you, in spite of our request and in spite of our protest, say that the debate shall take place today only. This is certainly not the way that things should be viewed. I am imploring and request you for good and orderly working in this House. Normally these things do not happen. This is an extreme situation calling for extreme patience from you. After all, rules are made for our convenience and for the benefit of the House. We are not slaves to the rules. As members of the Legislature, we should have pragmatic approach to a situation. That is why, my friend Sri Devaraj Urs stated that if you think the adjournment motion cannot be taken up tomorrow, right now put the motion to vote. Let us be clear. I also suggested to you that if it is

commendable to the Leader of the House, this may come up in any shape or form. As Leader of the House, he has unfettered discretion to make a statement any time when an opportunity arises out of another interpellation, etc. We are not prepared to hit and run out; it is not our intention. We all want to hear the other side fully. We as reasonable men, if we consider that the other side is reasonable, we may change our opinion; if they convince us, we may come to a different conclusion. Therefore, I am appealing to you not to stand on izzath. Izzath may be for us and for them. You please see the scales above your head and hold the scales even between all of us. Here is a situation where the whole country is watching: the students are watching and everybody is watching. What happens if you put it to vote? That is a different matter. We will have to think of different strategies. Merely by voting, you cannot run democracy like this. The heavens are not going to fall if you take up this tomorrow. Let the Members on the other side also have their full say. If there are other Members wishing to speak we are interested to hear them also. So I appeal to you once again to reconsider the point. If you still put it to vote, we will think of a different strategy.

Mr. SPEAKER.—If that were so, I would have closed the debate earlier. When I made a reference to Sri Sivappa and others, it was not to offend any one. It was only with a view to see that members respect the words of the leaders and nothing else. If we do not follow parliamentary conventions, how can proceedings go on? I want a parliamentary debate. I promised the hon. members on that side that there should be some reply from the Government.

Sri K. H. PATIL.—There was no motion for extension of time, Sir.

Mr. SPEAKER.—There was. I am sure it is recorded. It is also adopted.

†ಶ್ರೀ ಎನ್. ಹುಚ್ಚವಾಸ್ತಿಗೌಡ.—ಸ್ವಾಮಿ ಅಧ್ಯಕ್ಷರೇ, ತಾವು ಬೆಳಿಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ವಿಷಯದಲ್ಲಿ ನಾನು ಏನೋ ಹೇಳುತ್ತಾ ಇದ್ದಾಗ ಕಮಿಟಿಯಲ್ಲಿ ನಡೆದ ವಿಷಯಗಳನ್ನು ಹೇಳುವುದು ಇಂಪ್ರಾಪರ್ ಅಂತ ಹೇಳಿದಿರಿ. ಒಬ್ಬ ಸದಸ್ಯ ಹೇಳುವುದು ಇಂಪ್ರಾಪರು ಅಂತ ಹೇಳಿದ ಮೇಲೆ ಅಧ್ಯಕ್ಷರಾಗಿ ತಾವು ಅದೇ ಕೆಲಸ ಮಾಡುತ್ತಾ ಇದ್ದೀರಲ್ಲಾ ಎಂದು ವ್ಯಥೆಯಿಂದ ಹೇಳಬೇಕಾಗಿದೆ. ತಾವು ಇಲ್ಲಿ ವಿದ್ಯಮಾನಗಳನ್ನು ನೋಡಿದ್ದೀರಿ. ಇರತಕ್ಕ ರೂರ್ಸ್ ಬರವಣಿಗೆಯಲ್ಲಿ ಇವೆ. ರೂಲ್ಸನ್ನು ಬದಿಗೆ ಇಟ್ಟು ಕೆಲಸ ಮಾಡೋಣ ಅಂತ ಹೇಳಿ ನಾವು ಮಾಡಿದೆವು. ರೂಲ್ಸ್‌ಗಿಂತ ಸಂಪ್ರದಾಯಕ್ಕೆ ಬಲವತ್ತರವಾದ ಅಡ್ಡಿಆದಚಣಗಳೇನೂ ಇಲ್ಲ ಎಂದು ಹೇಳಿ ಮಹೋನ್ನತವಾದ ಉದ್ದೇಶವನ್ನಿಟ್ಟುಕೊಂಡು ನಡೆಸಬೇಕೆಂದು ನಮ್ಮ ಆಶೆ. ಈ ದಿವಸ ಈ ಅಭಿಪ್ರಾಯ ಇಷ್ಟು ಬಲವಾಗಿ ಇದ್ದರೂ ಕೂಡ ತಾವು ಏನೋ ಮನಸ್ಸಿನಲ್ಲಿ ಇಟ್ಟುಕೊಂಡು ಕೆಲಸ ಮಾಡುತ್ತಾ ಇದ್ದೀರಿ ಅನ್ನುವ ಹಾಗೆ ಶಂಕೆ ಉಂಟಾಗುತ್ತಿದೆ. ನಮ್ಮ ಅಭಿಪ್ರಾಯಗಳನ್ನೆರ್ನಾ ಪೂರ್ಣವಾಗಿ ಹೇಳುವುದಕ್ಕೆ ಅವಕಾಶ ಕೊಡಬೇಕು. ನಿನ್ನೆ ನಾವು ಬಿಜಿನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್‌ನಲ್ಲಿ ತೀರ್ಮಾನಮಾಡಿದ ಹಾಗೆ ನಾವು ದಿನವೂ ಸಂಜೆ 6 ಗಂಟೆಯ ಮೇಲೆ ಕೂತು ಕೊಳ್ಳುವುದು ಸರಿಯಿಲ್ಲವೆಂದು ತಾವು ಹೇಳಿ, ಏನೋ ಒಂದು ಅರ್ಧಗಂಟೆ ಜಾಸ್ತಿಯಾದರೆ ಅಷ್ಟರಲ್ಲಿ ಈ ವಿಚಾರವನ್ನು ಪೂರ್ತಿಸೋಣವೆಂದು ತಾವು ಹೇಳಿದಿರಿ. ಇವತ್ತು ಅರ್ಧ ಗಂಟೆಯಲ್ಲ, ಇನ್ನೂ 2 ಗಂಟೆಗಳ ಕಾಲ ಕೊಟ್ಟರೂ ಇದನ್ನು ಪೂರ್ತಿಸುವುದಕ್ಕಾಗುವುದಿಲ್ಲ. ಆದ್ದರಿಂದ ದಯವಾಡಿ ನಾಳೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ. ಸುಗಮವಾಗಿ ಈ ಸಭೆ ನಡೆಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ. ಏನು ಒಂದು ಅಭಿಪ್ರಾಯವನ್ನು ತಾವು ಇಟ್ಟುಕೊಂಡಿದ್ದೀರೋ ಅದನ್ನು ಬದಿಗಿಟ್ಟು ಈ ಸಭೆ ಸುಗಮವಾಗಿ ನಡೆಯುವುದಕ್ಕೆ ತಾವು ಪ್ರಯತ್ನಮಾಡಬೇಕೆಂದು ನಾನು ಹೇಳುತ್ತೇನೆ.

Mr. SPEAKER.—Let us see how it proceeds.

Sri M. NAGAPPA.—I rise to a point of order. ತಾವು ನಮಗೆ ಈ ವಿಚಾರವಾಗಿ ಮಾತನಾಡುವುದಕ್ಕೆ ಕೇವಲ 5 ನಿಮಿಷಗಳನ್ನು ಮಾತ್ರ ಕೊಡುತ್ತೇನೆಂದು ಹೇಳುತ್ತೀರಿ. ಎಲ್ಲರಿಗೂ ರೂಲ್ಸ್ ಪ್ರಕಾರ ನಡೆಯಿರಿ ಎಂದು ಹೇಳುತ್ತೀರಿ, ಆದರೆ ತಾವೇ ಆ ರೀತಿ ನಡೆಯುತ್ತಾ ಇಲ್ಲವೆಂದು ಕಾಣುತ್ತದೆ.

Mr. SPEAKER.—I want the hon. Member to tell me whether discussion on such motions could be adjourned ?

ಶ್ರೀ ಎಂ. ನಾಗಪ್ಪ.—ತಾವು ಪ್ರೊಸೀಡಿಂಗ್ಸ್ ತರಿಸಿ ನೋಡಿದರೆ ಎಲ್ಲವೂ ಗೊತ್ತಾಗುತ್ತದೆ. ತಾವೇ ನಮ್ಮ ಕಾಲವನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೀರಿ. ನಮಗೆ ಮಾತನಾಡುವುದಕ್ಕೆ ಕಾಲಾವಕಾಶವೇ ಇಲ್ಲ. ತಾವು ರೂಲ್ಸ್ ಮತ್ತು ಕನ್‌ವೆನ್‌ಷನ್ ಎಂಬುದಾಗಿ ಏನೇನು ಹೇಳಿದ್ದೀರೋ ಅವನ್ನೆಲ್ಲಾ ನಾವು ಕೇಳುತ್ತಾ ಬಂದಿದ್ದೇವೆ. ದಯವಿಟ್ಟು ತಾವು ರೂಲ್ 58ನ್ನು ನೋಡಿ ಅಪ್ಪಣೆ ಕೊಡಿಸಿದರೆ ತಮ್ಮ ರೂಲಿಂಗಿಗೆ ಬೆಲೆ ಕೊಡುತ್ತೇನೆ. ರೂಲ್ 58ರ ಪ್ರಕಾರ ನಮಗೆ 15 ನಿಮಿಷಗಳವರೆಗೆ ಮಾತನಾಡುವ ಅಧಿಕಾರ ಇದೆ. 15 ನಿಮಿಷಗಳಿಗಿಂತ ಹೆಚ್ಚಿಗೆ ಮಾತನಾಡುವುದಕ್ಕೆ ಮಾತ್ರ ತಮ್ಮ ಅಪ್ಪಣೆ ಬೇಕು. ಆದರೆ ನಮ್ಮನ್ನು ಕೇವಲ 2 ನಿಮಿಷ ಮಾತನಾಡಿ, 5 ನಿಮಿಷ ಹೊತನಾಡಿ ಎಂಬುದಾಗಿ ಹೇಳುವುದು ಸರಿಯಲ್ಲ. ನಾವು ಇಲ್ಲಿಗೆ ಒಂದು ಶಾಲೆಯಲ್ಲಿ ಪಾಠಮಾಡುವ ಹಾಗೆ ಬಂದಿಲ್ಲ. ತಮಗೆ ಈಗಾಗಲೇ ಅಡ್ಜರ್ನ್‌ಮೆಂಟ್ ಮೋಷನ್ನನ್ನು ಕೊಟ್ಟಿದ್ದೇವೆ. ಇವತ್ತು ಬೆಳಿಗ್ಗೆ ನಮಗೆ ಸುಮಾರು 48 ರಿಂದ 60 ಪುಟಗಳಿರತಕ್ಕ ಒಂದು ವರದಿಯನ್ನು ಕೊಟ್ಟಿದ್ದಾರೆ. ಅಂದಮೇಲೆ ಇಂತಹ ವರದಿಯ ಬಗ್ಗೆ ಕೇವಲ 5 ನಿಮಿಷಗಳು ಮಾತ್ರ ಮಾತನಾಡಿ ಎಂದು ಹೇಳಿದರೆ ನನಗೆ ನಾಚಿಕೆಯಾಗುತ್ತದೆ. ಪ್ರತಿಯೊಬ್ಬ ಸದಸ್ಯನಿಗೂ ಕನಿಷ್ಠ ಪಕ್ಷ 15 ನಿಮಿಷಗಳವರೆಗೆ ಮಾತನಾಡಬಹುದೆಂಬುದಾಗಿ ರೂಲ್ಸ್‌ನಲ್ಲಿರುವಾಗ ತಾವು ಅದನ್ನು ಕರ್‌ಟೈಲ್ ಮಾಡಿ ಈ ಸಭೆಯನ್ನು ತಾವು ತಮ್ಮ ರೂಲಿಂಗ್ ಪ್ರಕಾರ ನಡೆಸುತ್ತೇನೆ, ತಾವು ಹೇಳಿದನ್ನು ಸಾಧಿಸುತ್ತೇನೆ ಎಂದು ಹೇಳುವುದು ಸರಿಯಲ್ಲ. ತಾವು ಒಂದು ವೇಳೆ ಕೇವಲ 5 ನಿಮಿಷಗಳೆಂದು ನಿಶ್ಚಯ ಮಾಡಿದರೆ, ನನ್ನವಟ್ಟಿಗೆ ಮಾತ್ರ ನಾನು ಬೇರೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನನ್ನ 15 ನಿಮಿಷಗಳ ಹಕ್ಕನ್ನು ತಾವು ಕಸಿದುಕೊಳ್ಳಕೂಡದು. 15 ನಿಮಿಷಗಳಿಂತ ಒಂದು ನಿಮಿಷ ಕಡಿಮೆ ಮಾತನಾಡುವುದಕ್ಕೆ ನಾನು ತಯಾರಾಗಿಲ್ಲ. ಆದ್ದರಿಂದ ದಯವಿಟ್ಟು 15 ನಿಮಿಷಗಳವರೆಗೆ ಮಾತನಾಡಲು ಎಲ್ಲರಿಗೂ ಅವಕಾಶವನ್ನು ಕಲ್ಪಿಸಿಕೊಡಬೇಕು. ನಮಗೆ ಆ ಹಕ್ಕು ಇದೆ, ನಾವು ಅದನ್ನು ಚಲಾಯಿಸುತ್ತೇವೆ. 15 ನಿಮಿಷಗಳಿಗಿಂತ ಹೆಚ್ಚಿಗೆ ಮಾತನಾಡಬೇಕಾದರೆ, ಆಗ ತಮ್ಮ ಅಪ್ಪಣೆಯನ್ನು ಪಡೆಯುತ್ತೇವೆ.

ಅಧ್ಯಕ್ಷರು.—ಹಾಗಾದರೆ, ತಾವು 15 ನಿಮಿಷಗಳವರಗೂ ಮಾತನಾಡಿ.

7-30 P.M.

Sri H. M. CHANNABASAPPA.—He is perfectly correct. The rule says:

> "No speech during the debate shall, except with the permission of the Speaker, exceed fifteen minutes in duration."

So in order to speak for more than 15 minutes your permission is needed. Otherwise no permission is necessary. You prescribe five minutes. On such an important issue like this, why are you so particular that it should be finished today alone when the whole sense of the House is against it ?

Mr. SPEAKER.—Shall I take the vote of the House ?

Sri H. M. CHANNABASAPPA.—There are people ready to vote for anything.

Sri H. SIDDAVEERAPPA.—If it is to be put to vote, we shall have to resort to a different strategy. We shall not disclose now what that strategy is.

Sri H. M. CHANNABASAPPA.—Please do not drive us to resort to a strategy which may not be desirable. Please co-operate with us and do not impose conditions.

* * * * *

ಶ್ರೀ ಕೆ. ಎಚ್. ಪಾಟೀಲ್.—ಇನ್ನೂ 50 ಮಂದಿ ಮಾತನಾಡುವವರಿದ್ದಾರೆ. ತಾವು ಏಕೆ ಹೀಗೆ ಆತುರ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನನ್ನ ಒಂದು ಅರಿಕೆ. ಈಗ ಗಂಟೆ 7-35 ಆಯಿತು. ಇನ್ನು ನಿಲುವಳಿ ಸೂಚನೆಯನ್ನು ಕಳಿಸಿದಂತಹ 13 ಜನರು ಒಂದು ಕಡೆ ಮಾತನಾಡುವವರಿದ್ದಾರೆ. ಇನ್ನೊಂದು ಕಡೆ 11 ಜನರಿದ್ದಾರೆ. ಒಟ್ಟು 24 ಜನರು ಇನ್ನು ಮಾತನಾಡಬೇಕಾಗಿದೆ. ನೀವು ಹೇಳಿದಂತಹ ಕನಿಷ್ಠ 15 ನಿಮಿಷ ಎಂದು ಲೆಕ್ಕ ಹಾಕಿದರೂ, ಒಟ್ಟು ಸುಮಾರು 6 ಗಂಟೆ ಎರ್ಲಾ ಸದಸ್ಯರಿಗೂ ಮಾತನಾಡಲು ಬೇಕಾಗುತ್ತದೆ. ಅದೇ ರೀತಿ ಸರ್ಕಾರದ ಕಡೆಯಿಂದ ಉತ್ತರಕ್ಕೆ ಒಂದು-ಒಂದೂವರೆ ಗಂಟೆ ಬೇಕಾಗುತ್ತದೆ. ಹೀಗಾದರೆ, ಇದು ಮುಗಿಯುವಷ್ಟರಲ್ಲಿ ರಾತ್ರಿ 3 ಗಂಟೆಯಾಗುತ್ತದೆ. ಹೀಗೆ ನಾವು ರಾತ್ರಿ ತನಕ ಕೂತುಕೊಳ್ಳಲು ನೀವೇನು ನಮ್ಮನ್ನು ದನಗಳೆಂದು ತಿಳಿದುಕೊಂಡಿದ್ದೀರಾ? ನಾವೇನು ಮನುಷ್ಯರಲ್ಲವೇ? ತಾವು ಸ್ವಲ್ಪ ಗಂಭೀರವಾಗಿ ಇದನ್ನು ಯೋಚನೆ ಮಾಡಿ. ರಾತ್ರಿ ಕೂತುಕೊಳ್ಳಲು ನಮ್ಮಗೆ ಬೇರೇನೂ ಕೆಲಸವಿಲ್ಲವೆ!

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ನಾಗರಾಜರವರಿಗೆ ರಾತ್ರಿ ಅರ್ಜೆಂಟ್ ಕೆಲಸವಿರಬೇಕು. ಅವರನ್ನು ಬೇಗ ಕಳಿಸಿಬಿಡಿ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಸ್ವಾಮಿ, ನಾನು ಒಂದು ವಿಚಾರ ಹೇಳಬೇಕಾಗಿದೆ. ಬೆಳಗ್ಗೆ 9 ಗಂಟೆಗೆ ನಾವು ಬಂದವರು; ಮಧ್ಯಾಹ್ನ ನಮಗೆ ಊಟ ಕೂಡ ಇಲ್ಲ. ಸಾಯಂಕಾಲ ತಿಂಡಿಯೂ ಇಲ್ಲ, ಕಾಫಿಯೂ ಇಲ್ಲ. ನೀವು ರಾತ್ರಿ ತನಕ ಸಭೆಯನ್ನು ನಡೆಸುವುದಾದರೆ, ನಮಗೆ ಊಟ ತಿಂಡಿ ತರಿಸಿಕೊಟ್ಟು, ಸಭೆ ನಡೆಸಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನೀವು ಊಟ ಕೊಡಿಸುವುದಾದರೆ, ಒಂಬತ್ತೂವರೆ ಗಂಟೆಯ ಒಳಗೆ ಕೊಡಿಸುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು.—ನನ್ನ ಕೈಯಿಂದ ಕೊಡಲೋ, ಸರ್ಕಾರದ ಕಡೆಯಿಂದ ಕೊಡಲೋ?

ಶ್ರೀ ವಾಟಾಳ್ ನಾಗರಾಜ್.—ಹೀಗೆ ಸಭೆ ನಡೆದರೆ ನಮ್ಮ ಗತಿ ಏನು? ಅಧಿಕಾರಿಗಳ ಗತಿ ಏನು!

ಅಧ್ಯಕ್ಷರು.—ಹಾಗಾದರೆ ನಾನು ಸರ್ಕಾರ ತಿಂಡಿ ಒದಗಿಸಲು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಒಂದು ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಈಗ ಎಕ್ಸ್‌ಪ್ರೋ-70ಯ ಬಗ್ಗೆ ತಾವು 9½ ಗಂಟೆಯವರೆಗೆ ಈ ಸಭೆ ಚರ್ಚೆ ನಡೆಸಬಹುದೆಂದು ಆಶ್ವಾಸನೆ ಕೊಡಿಸಿದ್ದೀರಿ. ವಾಟಾಳ್ ನಾಗರಾಜರವರು ಹೇಳಿದ ಹಾಗೆ 24 ಜನರು ಕೇವಲ 15 ನಿಮಿಷ ಮಾತನಾಡಿದರೂ 6-7 ಗಂಟೆಗಳಾಗುತ್ತದೆ. ಆದರೆ ಇನ್ನೂ ಅನೇಕ ಜನರು ಮಾತನಾಡಬಹುದು. ಹೆಚ್ಚು ಕಡಿಮೆ ಒಂದು 50 ಜನರಿಗೆ ಮಾತನಾಡಲು ಇನ್ನೂ ಹೆಚ್ಚು ಕಾಲಾವಧಿಯು ಬೇಕಾಗುತ್ತದೆ. ಅದರಲ್ಲಿ ಕೆಲವರು 2-3 ನಿಮಿಷ ಮಾತನಾಡಬಹುದು, ಕೆಲವರು ಇನ್ನೂ ಹೆಚ್ಚು ಕಾಲ ಮಾತನಾಡಬಹುದು. ಜೊತೆಗೆ ತಾವು ಒಂದು ಮಾತು ಹೇಳಿದಿರಿ. ಸಿದ್ದವೀರಪ್ಪ, ಶಿವಪ್ಪ, ಹುಚ್ಚುಮಾಸ್ತಿಗೌಡ ಮುಂತಾದವರ ಹೆಸರುಗಳನ್ನು ಹೇಳಿದಿರಿ. ಮಾನ್ಯ ಶಿವಪ್ಪನವರು ಎಸ್. ಎ. ಡಿ. ನಾಯಕತ್ವಕ್ಕೆ ರಾಜಿನಾಮೆ ಕೊಟ್ಟಿದ್ದಾರೆಂದು ತಮಗೆ ಗೊತ್ತಿದೆ.

ಅಧ್ಯಕ್ಷರು.—ಅದು ನನಗೆ ಬರವಣಿಗೆಯ ಮೂಲಕ ಬಂದಿಲ್ಲ. ನನಗೆ ಅದು ಗೊತ್ತಿಲ್ಲ.

---

* * * * Matter expunged as directed by the Chair.

ಶ್ರೀ ಎಸ್. ಬಂಗಾರಪ್ಪ.—ಅದು ಇಡೀ ಸದನಕ್ಕೆ ಗೊತ್ತಿದೆ. ಅದನ್ನು ಮಾನ್ಯ ವೆಂಕಟಗಿರಿಯಪ್ಪನವರು ಪ್ರಕಟಣೆ ಮಾಡಿದ್ದಾರೆ. ಮಾನ್ಯ ಶಿವಪ್ಪನವರು ಎಸ್. ಎ. ಡಿ. ನಾಯಕತ್ವಕ್ಕೆ ರಾಜೀನಾಮೆ ಕೊಟ್ಟಿರುವುದರಿಂದ, ನೀವು ಅವರ ಹೆಸರನ್ನು ಅನ್ಯಾಯವಾಗಿ ಇಲ್ಲಿ ಎಳೆದಿದ್ದೀರಿ. ಆ ರೀತಿ ಮಾಡಿರುವುದು ನಿಮ್ಮ ಘನತೆಗೆ ಒಳ್ಳೆಯದಲ್ಲ.

ಅಧ್ಯಕ್ಷರು.—ನಿಮ್ಮ ನಾಯಕರಾದ ಶ್ರೀಮಾನ್ ಶಿವಪ್ಪನವರ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ಬಗ್ಗೆ ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಶಿವಪ್ಪನವರು ತಮ್ಮ ನಾಯಕತ್ವಕ್ಕೆ ರಾಜಿನಾಮೆಯನ್ನು ಕೊಟ್ಟಿದ್ದರಿಂದ ಎಸ್.ಎ.ಡಿ.ಗೆ ಈ ಪರಿಸ್ಥಿತಿ ಬಂದಿದೆ. ಈಗ ನಮಗೆ ನಾಯಕರು ಇಲ್ಲದೇ ಇರುವಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ಈಗ ತಾವು ಶ್ರೀ ಮಾನ್ ಶಿವಪ್ಪನವರ ಹೆಸರನ್ನು ಇಲ್ಲಿ ತಂದು ನಿಮ್ಮ ನಾಯಕರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಎಂದು ಹೇಳಿದರೆ ಅದು ಸರಿಯಲ್ಲ. ಈಗ ತಮ್ಮ ಅಭಿಪ್ರಾಯ ಈ ದಿವಸವೇ ಈ ಚರ್ಚೆಯನ್ನು 9-30 ಗಂಟೆಗೆ ಮುಗಿಸಬೇಕು ಎನ್ನುವುದಾದರೆ ನಾವು ಸಹ ಏನು ಮಾಡಬೇಕು ಎಂದು ತೀರ್ಮಾನ ಮಾಡಿಕೊಂಡು ಕುಳಿತುಕೊಂಡಿದ್ದೇವೆ. ತಾವು ರೂರ್ಸ್ ಪ್ರಕಾರ ಇದನ್ನು ಮಾಡುತ್ತೇವೆ ಎಂದು ಹೇಳುತ್ತೀರಿ. ನಾವೂ ಸಹ ಮುಂದೆ ಏನು ಮಾಡಬೇಕೆಂಬುದನ್ನು ರೂರ್ಸ್ ಪ್ರಕಾರವೇ ತೀರ್ಮಾನ ಮಾಡಿದ್ದೇವೆ. ರೂರ್ಸ್‌ಗಳು ತಮಗೆ ಅನಾನುಕೂಲವಾದಾಗ ತಮ್ಮ ರೂರ್ಸ್‌ಗಳನ್ನೆ ಶ್ರೀಮಾನ್ ನಾಗಪ್ಪನವರು ಓದಿದರೆ ಅದು ತಮಗೆ ಹಿಡಿಸುವುದಿಲ್ಲ. ಹೀಗಿರುವಾಗ ತಮ್ಮ ರೂರ್ಸ್‌ಅನ್ನು ತಾವೇ ಯೋಚನೆ ಮಾಡಬೇಕು. ತಮ್ಮ ರೂರ್ಸ್ ಅನ್ನು ಫಾಲೋ ಮಾಡಬೇಕು ಎಂದು ನಾವುಗಳೆಲ್ಲ ರೂರ್ಸ್‌ಗಳನ್ನು ಓದಿ ತಯಾರಾಗಿದ್ದೇವೆ. ಈ ದೃಷ್ಟಿಯಿಂದ ನಾನು ಎಲ್ಲಾ ನಾಯಕರುಗಳನ್ನೂ ಮತ್ತು ಮಾನ್ಯ ಅಧ್ಯಕ್ಷರನ್ನೂ ಕೇಳಿಕೊಳ್ಳುತ್ತೇನೆ, ದಯವಿಟ್ಟು ಈ ಚರ್ಚೆಯನ್ನು ಇವೊತ್ತು ಇಲ್ಲಗೆ ಸಾಕು ಮಾಡಿ, ಇದರಿಂದ ಯಾವ ಉಪಯೋಗವೂ ಕಾಣುವುದಿಲ್ಲ. ಇವೊತ್ತು 9½, 10 ಗಂಟೆಯವರೆಗೂ ಕುಳಿತುಕೊಳ್ಳುವುದು ಬೇಡ. ಈ ಚರ್ಚೆಯನ್ನು ಬೇಕಾದರೆ ನಾಳೆ ತೆಗೆದುಕೊಳ್ಳೋಣ. ನಾನು ಇವೊತ್ತಿನ ವಾತಾವರಣವನ್ನು ನೋಡಿ ಹೀಗೆ ಇದನ್ನು ಹೇಳಿದ್ದೇನೆ. ತಮಗೆ ಸಮಂಜಸ ಕಂಡುಬಂದರೆ ಈ ರೀತಿ ಮಾಡಿ, ಇಲ್ಲದಿದ್ದರೆ ಫಲತಾಂಶವನ್ನು ಅನುಭವಿಸಿ ನೋಡಿ.

ಅಧ್ಯಕ್ಷರು.—ನನಗೆ ಬೆದರಿಕೆ ಹಾಕುತ್ತೀರಾ ? ಈ ರೀತಿ ಮಾತನಾಡುವುದು ಸರಿಯಲ್ಲ. ನಿಮ್ಮ ಬೆದರಿಕೆಗೆ ನಾನು ಹೆದರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವೂ ಹೆದರುವುದಿಲ್ಲ.

ಶ್ರೀ ಎನ್. ಎ. ಜನ್ನೇಗೌಡ —ಸ್ವಾಮಿ, ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ನನ್ನ ಕ್ರಿಯಾಲೋಪ ಇಷ್ಟೆ. ಈಗಾಗಲೇ 8 ಗಂಟೆ ಆಗಿದೆ. ಆದ್ದರಿಂದ ಇನ್ನೂ ಈ ಚರ್ಚೆಯ ಮೇಲೆ ಮಾತನಾಡುವವರು ಎಷ್ಟು ಜನ ಸದಸ್ಯರು ಇದ್ದಾರೆ ಎಂಬುದನ್ನು ತಿಳಿದುಕೊಳ್ಳಿ. ಒಂದು ವೇಳೆ ಮಾತನಾಡುವವರು 5-6 ಜನ ಮಾನ್ಯ ಸದಸ್ಯರು ಇದ್ದರೆ 9-30 ಗಂಟೆಯೊಳಗೆ ಚರ್ಚೆ ಮುಗಿಯುವುದಾದರೆ ಕುಳಿತುಕೊಳ್ಳೋಣ. ಹೆಚ್ಚು ಜನ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಇಚ್ಛೆ ಪಡುವುದಾದರೆ ಅವರ ಹಕ್ಕನ್ನು ಮೊಟಕು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ಮೊದಲು ಎಷ್ಟು ಜನ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಇಚ್ಛೆ ಪಡುತ್ತಾರೆ ಎಂಬುದನ್ನು ಮೊದಲು ತಿಳಿದುಕೊಳ್ಳಿ. ಒಂದುವೇಳೆ 50 ಜನ ಸದಸ್ಯರು ಮಾತನಾಡುವುದಕ್ಕೆ ಇಚ್ಛೆ ಪಡುವುದಾದರೆ ಅವರೆಲ್ಲರೂ ಮಾತನಾಡಬೇಕಾದರೆ ರಾತ್ರಿ 3-4 ಗಂಟೆಯಾಗುತ್ತದೆ. ಈಗ ಎಷ್ಟು ಜನ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಇಚ್ಛೆಪಡುತ್ತಾರೆ ಎಂಬುದನ್ನು ತಿಳಿದುಕೊಳ್ಳದೆ ವ್ಯರ್ಥ ಕಾಲಹರಣ ಮಾಡುತ್ತಿದ್ದೀರಿ, ಇದರಿಂದ ಸದಸ್ಯರಿಗೆ ತೊಂದರೆಯಾಗುತ್ತದೆ.

Mr. SPEAKER.—I called upon Sri D. M. Siddaiah to speak at about 5 O'Clock.

ಶ್ರೀ ವಾಟಾಳ್ ನಾಗರಾಜ್.—ಹಾಡಿದ್ದೇ ಹಾಡೋ ಕಸುಬಾಯಿದಾಸ ಎಂದು ತಾವು ಹೇಳಿದ್ದೇ ಹೇಳುತ್ತಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ಸ್ವಾಮಿ, ತಾವು ಮೊದಲು ಈ ಚರ್ಚೆಯನ್ನು ಪ್ರಾರಂಭಿಸುವಾಗ ಹೇಳಿದಿರಿ, ಇದಕ್ಕೆ ನಮ್ಮ ನಾಯಕರ ಒಪ್ಪಿಗೆಯನ್ನು ಕೇಳಿದ್ದೇವೆ ಅವರು ಈ ಚರ್ಚೆಯನ್ನು ಇವೊತ್ತೇ ಮುಗಿಸೋಣ ಎಂದು ಹೇಳಿದ್ದಾರೆ ಎಂದು. ಆದರೆ ತಾವು ರೂರ್ ಸಸ್ಪೆಂಡ್ ಮಾಡುವ ಕಾಲದಲ್ಲಿ ಇದಕ್ಕೆ ಜೈಮ್ ಫಿಕ್ಸ್ ಮಾಡಲಲ್ಲ. ಮೊದಲೇ ರೂರ್ ಸಸ್ಪೆಂಡ್ ಮಾಡಿ ಇಷ್ಟು ಗಂಟೆ

(ಶ್ರೀ ಡಿ. ದೇವರಾಜ್ ಅರಸ್)

ಯೊಳಗೆ ಎಂದರೆ 6-8 ಗಂಟೆಗಳ ಕಾಲ ಕುಳಿತುಕೊಳ್ಳೋಣ ಅಷ್ಟರೊಳಗೆ ಮುಗಿಸೋಣ ಎಂದು ಹೇಳಿದ್ದರೆ ಚೆನ್ನಾಗಿತ್ತು. ಅದು ಏನು ಕಾರಣವೋ ಏನೋ ತಾವು ತಮ್ಮ ರೂಲಿಂಗ್‌ನಲ್ಲಿ ಇದಕ್ಕೆ ಟೈಮ್ ಫಿಕ್ಸ್ ಮಾಡಲಿಲ್ಲ. ಈಗ ತಾವು ಹೇಳುತ್ತೀರಿ 9½ ಗಂಟೆಯವರೆಗೂ ಈ ಚರ್ಚೆಯನ್ನು ನಡೆಸಿ ಇವೊತ್ತೇ ಮುಗಿಸೋಣ ಎಂದು. ಈ ಮಧ್ಯೆ ಶ್ರೀಮಾನ್ ಚನ್ನೇಗೌಡರು ಒಂದು ಸಲಹೆಯನ್ನು ಕೊಟ್ಟರು. ಮೊದಲು ಎಷ್ಟು ಜನ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಇಚ್ಛೆಪಡುತ್ತಾರೆ ಎಂಬುದನ್ನು ತಿಳಿದುಕೊಳ್ಳಿ, ಮಾತನಾಡುವವರು ಕಡಿಮೆ ಇದ್ದರೆ ಇವೊತ್ತೇ ಮುಗಿಸೋಣ ಎಂದು. ಅದ್ದರಿಂದ ಈಗ ನಾನು ಹೇಳುವುದು ಏನೆಂದರೆ ಈಗ ಮೊದಲು ಎಷ್ಟು ಜನ ಸದಸ್ಯರು ಮಾತನಾಡುವುದಕ್ಕೆ ಇಚ್ಛೆಪಡುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಿ. ಒಂದು ವೇಳೆ 10 ಜನ ಮಾತನಾಡುವುದಾದರೆ ಬೇಗನೇ ಮುಗಿದು ಹೋಗಲಿ, ಅಥವಾ 25 ಜನ ಮಾತನಾಡುವವರು ಇದ್ದರೆ ಅದೂ ಲೆಕ್ಕ ಹಾಕಿ ರಾತ್ರಿ, 2—3 ಗಂಟೆಯೂ ಆಗುತ್ತದೆ, ಅವರೆಲ್ಲರೂ ಮಾತನಾಡಿದಮೇರೆ ಇವೊತ್ತೇ ಮುಗಿಸೋಣ. ಈ ದೃಷ್ಟಿಯಿಂದ ಶ್ರೀಮಾನ್ ಚನ್ನೇಗೌಡರು ಮಾಡಿದಂತಹ ಸಲಹೆ ಯೋಗ್ಯವಾಗಿದೆ.

ಅಧ್ಯಕ್ಷರು.—ಎಷ್ಟು ಜನ ಮಾತನಾಡುವವರಿದ್ದಾರೆಂಬ ಪಟ್ಟಿ ನನ್ನ ಹತ್ತಿರ ಇದೆ.

ಶ್ರೀ ಡಿ. ದೇವರಾಜ ಅರಸ್.—ಅವರ ಪ್ರಕಾರ ಒಟ್ಟು ಎಷ್ಟು ಸಮಯ ಬೇಕಾಗುತ್ತದೆ ಎಂಬುದನ್ನು ಲೆಕ್ಕ ಹಾಕಿ ನನಗೆ ತಿಳಿಸಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಲೆಕ್ಕಹಾಕಿ ತಿಳಿಸುವವರೆಗೆ ಬೇರೆಯವರು ಮಾತನಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ಲೆಕ್ಕ ಹಾಕುವವರೆಗೆ ಶ್ರೀ ಡಿ. ಎಂ. ಸಿದ್ಧಯ್ಯನವರು ಮಾತನಾಡುತ್ತಿರಲಿ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀ ಡಿ. ಎಂ. ಸಿದ್ಧಯ್ಯನವರ ಹೆಸರು ಪಟ್ಟಿಯಲ್ಲಿ ಇಲ್ಲ. ಅದ್ದರಿಂದ ಅವರಿಗೆ ಮಾತನಾಡುವುದಕ್ಕೆ ಏತಕ್ಕೆ ಅವಕಾಶ ಕೊಡುತ್ತೀರಿ ?

ಶ್ರೀ ಬಿ. ಗಂಗಣ್ಣ.—ಪಾಯಿಂಟ್ ಆಫ್ ಆರ್ಡರ್ ಸರ್. ಈಗ ಎಸ್. ಬಿ. ಡಿ ನಾಯಕರು ರಾಜೀನಾಮೆ ಕೊಟ್ಟಿರುವುದರಿಂದ ನಮಗೆ ಒಂದು ಸಂಶಯ ಬಂದಿದೆ. ಅವರು ಬೇರೆ ನಾಯಕರನ್ನು ಚುನಾಯಿಸಿದ್ದಾರೆಯೇ ಅಥವಾ ಮೈಯುಕ್ತಿಕವಾಗಿ ಇಲ್ಲಿ ಚರ್ಚೆ ನಡೆಸುತ್ತಿದ್ದಾರೆಯೇ ಎಂಬ ಅಂಶದ ಬಗ್ಗೆ ನಮಗೆ ಸಂಶಯ ಉಂಟಾಗಿದೆ. ಅದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಈಗ ನನ್ನ ಹತ್ತಿರವಿರುವ ಲಿಸ್ಟ್‌ನಲ್ಲಿ 29 ಜನ ಸದಸ್ಯರು ಇನ್ನೂ ಮಾತನಾಡುವವರಿದ್ದಾರೆ.

ಶ್ರೀ ಪಟಾಳ್ ನಾಗರಾಜ್.—ಅಷ್ಟು ಜನರು ಮಾತನಾಡಲು ಎಷ್ಟು ಸಮಯ ಬೇಕಾಗುತ್ತದೆಂಬುದನ್ನು ಗುಣಾಕಾರ ಹಾಕಿ ನೋಡಿ.

ಅಧ್ಯಕ್ಷರು.—ಗುಣಾಕಾರ ಹಾಕಲು ನನಗೆ ಬರುತ್ತದೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ಗಂಗಣ್ಣ.—ನನ್ನ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ತಾವು ರೂಲಿಂಗ್ ಕೊಡಲಿಲ್ಲ.

8-00 P.M.

ಶ್ರೀ ಅಧ್ಯಕ್ಷರು.—ತಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದು ನನಗೆ ಗೊತ್ತಾಗಲಿಲ್ಲ

ಶ್ರೀ ಕೆ. ಪ್ರಭಾಕರ್.—ಈಗ ಈ ಮನೆ ಆರ್ಡರ್‌ನಲ್ಲಿ ಇಲ್ಲ. ಆ ಬಗ್ಗೆ ತಾವು ರೂಲಿಂಗ್ ಕೊಡಬೇಕು.

Mr. SPEAKER.—There are a number of point of orders. I am thoroughly exhausted. But anyway the discussion on this motion must end to-day.

Sri D. DEVARAJ URS.—That is why Sri Channe Gowda suggested to fix up time taking into consideration the number of speakers.

Mr. SPEAKER.—I am very much exhausted. Now, I shall put the motion as talked-over to the House.

Sri H. M. CHANNABASAPPA.—Sir, the right of the Members to speak has to be conceded.

Mr. SPEAKER.—I am only acting according to the rules. The rules clearly say that if the time of the discussion exceeds, it has to be put before the House, as talked-over. Now, I would like to know the opinion of the Treasury Benches.

Sri B. RACHAIAH.—Sir, since the House has extended the time of discussion up to 9-30 P.M., let the discussion continue till that time and thereafter the motion be put to the House.

* * * * * * * *

Sri M. N. RAMANNA.—On a point of order. The Hon. Speaker asked the opinion of the Government and the Minister Sri B. Rachaiah expressed his opinion. Has the hon. Member Sri R. Dayananda Sagar any right to abuse the hon. Minister ?

Mr. SPEAKER.—I have already ordered the expunction of the observations.

Sri B. RACHAIAH.—That is not sufficient. The hon. Member must express regret. He cannot abuse like this.

(Several Members rose from their seats)

Mr. SPEAKER.—Order, Order. I direct all the hon. Members to resume their seats. In view of the fact that the time has been extended up to 9-30 P.M., if the hon. Members want to continue the discussion they may do so. I would like to know the sense of the House whether any hon. Member is inclined to utilise the extended time up to 9-30 P.M. ?

(No hon. Member stood up to speak)

Mr. SPEAKER.—As no hon. Member wishes to utilise the extended time, I declare that the motion is talked over and the discussion on the matter therefore ends. Now, since there is no other business before the House, I declare that the House stands adjourned to meet tomorrow at One of the Clock.

The House adjourned at Fifteen Minutes past Eight of the Clock to meet again at One of the Clock on Tuesday, the 22nd September 1970.

** * Matter expunged as ordered by the Chair.

WD 15409 - GPB - 55 18 11 7